‘ಈ ಸರಣಿ ಸಿನಿಮಾಗಳಿಂದ ನನಗೆ ಬೇರೆ ಬೇರೆ ರೀತಿಯ ಸಮಸ್ಯೆಗಳು ಅರ್ಥ ಆದವು. ಜೊತೆಗೆ ಮಹಿಳೆಯರ, ಮಕ್ಕಳ ಬೆಂಬಲಕ್ಕಾಗಿ ಎಷ್ಟೆಲ್ಲ ಯೋಜನೆಗಳಿವೆ ಎಂಬುದೂ ಗೊತ್ತಾಯಿತು. ಮಹಿಳೆಯರ ಶಿಕ್ಷಣ, ವಸತಿ, ಪ್ರಯಾಣ ಇವಕ್ಕೆಲ್ಲ ಇಷ್ಟೊಂದು ಯೋಜನೆಗಳಿವೆ ಎಂಬುದು ನನಗೆ ಗೊತ್ತೇ ಇರಲಿಲ್ಲ. ಈ ಅರಿವಿನ ಜೊತೆಗೆ, ಇಪ್ಪತ್ತು ಸಿನಿಮಾಗಳನ್ನು ನಿರಂತರವಾಗಿ ರೂಪಿಸುವ ಖುಷಿ ಬೇರೆಯೇ ರೀತಿಯದ್ದು’ ಅನ್ನುತ್ತಾರೆ ಅನನ್ಯಾ.

ಈ ಇಪ್ಪತ್ತು ಸಿನಿಮಾಗಳಲ್ಲಿ ಕನ್ನಡದ ಹಲವು ಕಥೆಗಳನ್ನು ತೆರೆಯ ಮೇಲೆ ತರಲಾಗಿದೆ. ಇನ್ನು ಕೆಲವು ಕಥೆಗಳನ್ನು ಅನನ್ಯಾ, ಗಿರೀಶ ಕಾಸರವಳ್ಳಿ ಮತ್ತು ಬರಹಗಾರ ಕಿರಣ್ ಕುಮಾರ್ ಅವರು ಬರೆದಿದ್ದಾರೆ.

ಒಂದು ವರ್ಷದ ಈ ಯೋಜನೆ ಮುಂದಿನ ವರ್ಷ ಮಹಿಳಾ ದಿನಾಚರಣೆಯ ಹೊತ್ತಿಗೆ ಮುಕ್ತಾಯಗೊಳ್ಳಲಿದೆ.

ಈಗಾಗಲೇ ಈ ಸರಣಿಯ ಮೊದಲ ಐದು ಸಿನಿಮಾಗಳು ದೂರದರ್ಶನದಲ್ಲಿ ಪ್ರಸಾರವಾಗಿವೆ. ಅದಕ್ಕೆ ಒಳ್ಳೆಯ ಸ್ಪಂದನ ಸಿಕ್ಕಿರುವುದೂ ತಂಡದ ಉತ್ಸಾಹವನ್ನು ಇಮ್ಮಡಿಸಿದೆ. ಮುಂದಿನ ಹಂತದಲ್ಲಿ ಮತ್ತೆ ಐದು ಸಿನಿಮಾಗಳು ಪ್ರಸಾರವಾಗಲಿವೆ. ಸದ್ಯದಲ್ಲಿಯೇ ಯೂಟ್ಯೂಬ್‌ನಲ್ಲಿಯೂ ಈ ಎಲ್ಲ ಸಿನಿಮಾಗಳು ವೀಕ್ಷಣೆಗೆ ಲಭ್ಯವಾಗಲಿವೆ.

‘ಜಿ.ಎಸ್. ಭಾಸ್ಕರ್, ರಾಹುಲ್ ರಾಯ್, ಗಣೇಶ ಕೆಳಮನೆ, ಕಣ್ಣನ್ ಮೋಹನ್ ಹೀಗೆ ಹಲವರು ಈ ಸರಣಿ ಸಿನಿಮಾಗಳಲ್ಲಿ ಛಾಯಾಗ್ರಹಣ ಮಾಡುತ್ತಿದ್ದಾರೆ. ಪ್ರತಿ ಸಂಚಿಕೆಗೂ ಬೇರೆ ಕಲಾವಿದರನ್ನೇ ಆಯ್ದುಕೊಳ್ಳುತ್ತೇವೆ. ಆದಷ್ಟೂ ಒಂದು ಸಿನಿಮಾದಲ್ಲಿ ಬಂದ ಕಲಾವಿದರು ಪುನರಾವರ್ತನೆ ಆಗದಂತೆ ನೋಡಿಕೊಳ್ಳಬೇಕು ಅಂದುಕೊಂಡಿದ್ದೇವೆ. ಆದರೂ ಕೆಲವೊಮ್ಮೆ ಅದೇ ಕಲಾವಿದರನ್ನು ಬಳಸಿಕೊಳ್ಳಬೇಕಾಗಬಹುದು. ಬಹುತೇಕ ಎಲ್ಲರೂ ಹೊಸ ಕಲಾವಿದರು’ ಎಂದು ವಿವರಣೆ ನೀಡುತ್ತಾರೆ ಅನನ್ಯಾ.

ಈ ಯೋಜನೆ ಮುಗಿಯುತ್ತಿದ್ದಂತೆಯೇ ಮತ್ತೊಂದು ಸಿನಿಮಾದ ನಿರ್ದೇಶನಕ್ಕೆ ತೊಡಗಿಕೊಳ್ಳುವ ಸಿದ್ಧತೆಯನ್ನೂ ಅನನ್ಯಾ ಮಾಡಿಕೊಂಡಿದ್ದಾರೆ.

‘ನಟನೆ ಮತ್ತು ನಿರ್ದೇಶನ ಎರಡೂ ಕಷ್ಟವೇ. ಅವುಗಳಿಗೆ ಅವುಗಳದ್ದೇ ಆದ ಶಕ್ತಿ–ಸವಾಲುಗಳಿವೆ. ಎರಡಕ್ಕೂ ನಾವು ಸಿದ್ಧರಾಗಬೇಕಾದ ರೀತಿ ಬೇರೆಯೇ. ನಾನು ಆ ಎರಡೂ ಪ್ರಕ್ರಿಯೆಗಳನ್ನು ಎಂಜಾಯ್ ಮಾಡುತ್ತೇನೆ. ಹಾಗಾಗಿಯೇ ಆ ಎರಡೂ ದಾರಿಯಲ್ಲಿ ಮುಂದುವರಿಯುತ್ತೇನೆ’ ಎಂದು ನಗುತ್ತಾರೆ ಅನನ್ಯಾ. ■

# ಸರೋಜಿನಿಯಾದ ಸೋನಲ್!




ಕನ್ನಡದ ಬಹುಬೇಡಿಕೆಯ ನಟಿಯರಲ್ಲಿ ಸೋನಲ್ ಮೊಂತೆರೊ ಕೂಡ ಒಬ್ಬರು. ಯೋಗರಾಜ ಭಟ್ಟರ ‘ಪಂಚತಂತ್ರ’ ಗಲ್ಲಾಪೆಟ್ಟಿಗೆಯಲ್ಲಿ ಸೌಂಡು ಮಾಡಿದ್ದು ಅಷ್ಟಕ್ಕಷ್ಟೇ ಆದರೂ ಈ ಕರಾವಳಿಯ ಈ ಹುಡುಗಿಯ ವೃತ್ತಿಬದುಕಿಗೆ ವೇಗವರ್ಧಕವಾಗಿ ಕೆಲಸ ಮಾಡಿದ್ದಂತೂ ದಿಟ. ಆ ಸಿನಿಮಾದ ನಂತರ ಒಂದರ ಹಿಂದೆ ಇನ್ನೊಂದರಂತೆ ಸಿನಿಮಾಗಳಲ್ಲಿ ನಟಿಸುವ ಅವಕಾಶಗಳನ್ನು ಗಿಟ್ಟಿಸಿಕೊಳ್ಳುತ್ತಲೇ ಬಂದ ಅವರ ಮಾರುಕಟ್ಟೆ ಕೋವಿಡ್ ಕಾಲದಲ್ಲಿಯೂ ಇಳಿದಿಲ್ಲ. ಮತ್ತೆ ಈಗ ಭಟ್ಟರ ‘ಗರಡಿ’ಯಲ್ಲಿ ತಮ್ಮ ನಟನೆಗೆ ಇನ್ನಷ್ಟು ಹೊಳಪು ಗಿಟ್ಟಿಸಿಕೊಳ್ಳುತ್ತಿರುವ ಅವರು ಬಾಲಿವುಡ್‌ಗೂ ಜಿಗಿದಿದ್ದಾರೆ.

ಬಾಲಿವುಡ್‌ನ ಅಂಗಳಕ್ಕೆ ಅಡಿಯಿಟ್ಟಿರುವುದಷ್ಟೇ ಸುದ್ದಿಯಲ್ಲ, ಅಲ್ಲಿ ಅವರು ನಟಿಸುತ್ತಿರುವ ಸಿನಿಮಾ ಕೂಡ ವಿಶೇಷವಾಗಿದ್ದೇ ಆಗಿದೆ. ಭಾರತದ ಗಾನಕೋಗಿಲೆ ಎಂದು ಹೆಸರು ಗಳಿಸಿದ್ದ, ಸ್ವಾತಂತ್ರ್ಯ ಹೋರಾಟದಲ್ಲಿನ ಗಟ್ಟಿಗಿತ್ತಿಯರ ಸಾಲಿನಲ್ಲಿದ್ದ ಸರೋಜಿನಿ ನಾಯ್ಡು ಅವರ ಪಾತ್ರದಲ್ಲಿ ಸೋನಲ್ ಕಾಣಿಸಿಕೊಳ್ಳುತ್ತಿದ್ದಾರೆ. ಇದನ್ನು ಅದೃಷ್ಟವೆನ್ನದೆ ಇರಲಾದೀತೆ?

‘ಸರೋಜಿನಿ’ ಎಂಬ ಹೆಸರಿನ ಈ ಸಿನಿಮಾವನ್ನು ಕನ್ನಡಿಗರೇ ಆದ ವಿನಯ್ ಚಂದ್ರ ನಿರ್ದೇಶಿಸುತ್ತಿದ್ದಾರೆ. ಹಿಂದಿಯ ಜೊತೆಯಲ್ಲಿಯೇ ಕನ್ನಡದಲ್ಲಿಯೂ ಇದು ಚಿತ್ರೀಕರಣವಾಗುತ್ತಿದೆ. ತಮಿಳು ಮತ್ತು ತೆಲುಗು ಭಾಷೆಗಳಿಗೆ ಡಬ್ ಆಗುತ್ತಿದೆ. ಈ ಜೀವನಾಧಾರಿತ ಸಿನಿಮಾದಲ್ಲಿ, ಸರೋಜಿನಿ ನಾಯ್ಡು ಪಾತ್ರದಲ್ಲಿ ಸೋನಲ್ ಮೊಂತೆರೊ ಮತ್ತು ಬಹುಭಾಷಾ ನಟಿ ಶಾಂತಿಪ್ರಿಯ ನಟಿಸುತ್ತಿದ್ದಾರೆ. ಸರೋಜಿನಿ ನಾಯ್ಡು ಅವರ ಪತಿ ಗೋವಿಂದರಾಜುಲು ಪಾತ್ರದಲ್ಲಿ ಹಿತೇನ್ ತೇಜ್ವಾನಿ ಕಾಣಿಸಿಕೊಳ್ಳಲಿದ್ದಾರೆ.

ಸರೋಜಿನಿ ನಾಯ್ಡು ಅವರ ಕುರಿತು ಸಂಶೋಧನೆ ಮಾಡುತ್ತಿರುವ ಧೀರಜ್ ಮಿಶ್ರ ಈ ಚಿತ್ರದ ಚಿತ್ರಕಥೆ ಬರೆದಿದ್ದಾರೆ. ಸಂಗೀತ ನಿರ್ದೇಶನದ ಜವಾಬ್ದಾರಿಯನ್ನೂ ವಿನಯ್ ಅವರೇ ಹೊತ್ತಿದ್ದಾರೆ. 1878 ರಿಂದ 1949ರ ನಡುವಿನ ಕಾಲಘಟ್ಟದಲ್ಲಿ ನಡೆಯುವ ಈ ಕಥೆಯಲ್ಲಿ ಆ ಕಾಲವನ್ನೇ ತೆರೆಯ ಮೇಲೆ ಮರುಸೃಷ್ಟಿಸುವ ಸಿದ್ಧತೆಯನ್ನು ಚಿತ್ರತಂಡ ಮಾಡಿಕೊಂಡಿದೆ. ಬೆಂಗಳೂರು, ಮುಂಬೈ, ಉತ್ತರ ಪ್ರದೇಶಗಳಲ್ಲಿ 50 ದಿನಗಳ ಕಾಲ ಚಿತ್ರೀಕರಣ ನಡೆಯಲಿದೆ.

ಈಗಾಗಲೇ ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ. ಅದರಲ್ಲಿ ಸೋನಲ್, ಸರೋಜಿನಿಯಾಗಿ ಮಿಂಚುತ್ತಿದ್ದಾರೆ. ಕನ್ನಡದಲ್ಲಿಯಂತೂ ಅದೃಷ್ಟದೇವತೆಯಿಂದ ನೆತ್ತಿಸವರಿಸಿಕೊಂಡೇ ಬಂದಂತಿದ್ದ ಸೋನಲ್‌ಗೆ ಈ ಸಿನಿಮಾ ಬಾಲಿವುಡ್‌ನ ಹೆಬ್ಬಾಗಿಲನ್ನು ತೆರೆದರೂ ಅಚ್ಚರಿಯೇನಿಲ್ಲ. ■



‘ಗರಡಿ’ ಸಿನಿಮಾದಲ್ಲಿ ಸೋನಲ್